# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.17/2025

Pw-02

Cw-02

ಸಾಕ್ಷಿದಾರರ ಹೆಸರುಃ ಶ್ರೀ ಬಸವರಾಜ ಗೌಡಿಕೆ

ತಂದೆಃಗಂಡನ ಹೆಸರುಃ ಶ್ರೀ ಬೀರಪ್ಪ

ವಯಸ್ಸುಃ 35 ವರ್ಷ

ಉದ್ಯೋಗಃ ಪಿಡಿಒ, ಅಬಲೂರು ಗ್ರಾಮ ಪಂಚಾಯತಿ

ವಾಸ ಸ್ಥಳಃ ಅಬಲೂರು

**ದಿನಾಂಕ:06.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಕಳೆದ 5 ವರ್ಷ ಅಬಲೂರು ಗ್ರಾಮ ಪಂಚಾಯತಿಯಲ್ಲಿ ಪಿಡಿಒ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕಃ12.02.2025 ರಂದು ರಾಣೇಬೆನ್ನೂರಿನ ಡಿವೈಎಸ್ಪಿ ರವರು ಕಳಗೊಂಡ ಗ್ರಾಮಕ್ಕೆ ಪಂಚನಾಮೆಗೆ ಬನ್ನಿ ಎಂದು ದೂರವಾಣಿ ಮೂಲಕ ನನಗೆ ತಿಳಿಸಿದರು. ಆಗ ನಾನು ನಮ್ಮ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿ ಅವರಿಂದ ಅನುಮತಿಯನ್ನು ಪಡೆದು ನಾನು ಕಳಗೊಂಡ ಗ್ರಾಮಕ್ಕೆ ಹೋದೆನು. ಆಗ ಸಂಜೆ 4.00 ಗಂಟೆಯಾಗಿತ್ತು.

2. ಸದರಿ ಸ್ಥಳವು ರಂಗನಾಥ ಸ್ವಾಮಿ ಕಾಲೋನಿಯ ಭರಮದೇವರ ಕಟ್ಟೆ ಹತ್ತಿರ ಇತ್ತು. ಸದರಿ ಘಟನಾ ಸ್ಥಳಕ್ಕೆ ರಾಣೇಬೆನ್ನೂರಿನ ಡಿವೈಎಸ್ಪಿ ಮತ್ತು ಇತರೆ ಪೊಲೀಸರು ಬಂದಿದ್ದರು. ನನ್ನ ಜೊತೆ ಹಿರೇಕೆರೂರು ತಹಶೀಲ್ದಾರ ಕಚೇರಿಯಿಂದ ಚಾಸಾ-3-ಜಬ್ಬೀರ ಅಬ್ಬಾಸ ರವರೂ ಸಹ ಬಂದಿದ್ದರು. ಆಗ ಪಿರ್ಯಾದಿ ತೋರಿಸಿದ ಘಟನಾ ಸ್ಥಳದಲ್ಲಿ ತನಿಖಾಧಿಕಾರಿಯು ಸ್ಥಳ ಪಂಚನಾಮೆ ಜರುಗಿಸಿ, ಪೋಟೋ ತೆಗೆದುಕೊಂಡು ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ.

3. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

ಪೋಲೀಸರು ತೆಗೆದ ಪೋಟೋವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ. ಪೋಟೋದಲ್ಲಿ ನನ್ನ ಭಾವ ಚಿತ್ರ ಇರುತ್ತದೆ.

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಜೆ.ಬಿ.ಕೆ ವಕೀಲರಿಂದಃ**

4. ಕಳಗೊಂಡ ಗ್ರಾಮವೂ ಸಹ ಅಬಲೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ ಎಂದರೆ ನಿಜ. ಕಳಗೊಂಡ ಗ್ರಾಮದ ಸರ್ವೇ ನಂ.3/2+3+4 ರಲ್ಲಿ 2 ಎಕರೆ 37 ಗುಂಟೆ ಇದ್ದು, ಸದರಿ ಜಮೀನು ಭೂ ಪರಿವರ್ತನೆಯಾಗಿಲ್ಲ ಎಂದರೆ ನಿಜ. ಸದರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡಿರುವ ಜನರು ನಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯಿಂದ ಯಾವುದೇ ಅನುಮತಿ ಪಡೆಯದೇ ಮನೆ ಕಟ್ಟಿಕೊಂಡಿರುತ್ತಾರೆಂದರೆ ನಿಜ.

5. ಪೊಲೀಸರು ನನಗೆ ಪೊಲೀಸ್ ನೋಟೀಸನ್ನು ಕೊಟ್ಟಿಲ್ಲ ಎಂದರೆ ನಿಜ. ನಾನು ಘಟನಾ ಸ್ಥಳಕ್ಕೆ ಹೋದಾಗ ಭರಮದೇವರ ಕಟ್ಟೆ ದೇವಸ್ಥಾನ ಅಲ್ಲಿ ಇತ್ತು. ಪಿರ್ಯಾದಿಯವರು ಸದರಿ ಭರಮದೇವರ ಕಟ್ಟೆ ದೇವಸ್ಥಾನವನ್ನು ಉದ್ದೇಶಪೂರ್ವಕವಾಗಿ ಹೊಸದಾಗಿ ಕಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಪಂಚನಾಮೆಯಲ್ಲಿ ಬರೆದಿರುವ ಸಂಗತಿಗಳು ಗೊತ್ತಿದೆ. ಈಗ ನನಗೆ ನಿಪಿ-3 ರ ಸ್ಥಳ ಪಂಚನಾಮೆಯನ್ನು ತೋರಿಸುತ್ತಿದ್ದು, ಅದರಲ್ಲಿ ಹೊಸದಾಗಿ ಕಟ್ಟಿರುವ ಭರಮದೇವರ ಕಟ್ಟೆ ದೇವಸ್ಥಾನ ಎಂದು ನಮೂದು ಮಾಡಲಾಗಿದೆ ಎಂದರೆ ನಿಜ.

6. ಘಟನಾ ಸ್ಥಳದ ಚಕ್ಕುಬಂಧಿಯನ್ನು ನನಗೆ ಈಗ ಹೇಳಲಾಗುವುದಿಲ್ಲ. ನನಗೆ ಪಂಚನಾಮೆ ಬಗ್ಗೆ ಯಾವುದೇ ವಿಷಯ ಗೊತ್ತಿಲ್ಲದೇ ಇದ್ದರೂ ಸಹ ಪಿರ್ಯಾದಿಗೆ ಸಹಾಯಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಂಚನಾಮೆಯನ್ನು ಟೈಪ್ ಮಾಡಲಾಗಿದೆ ಎಂದರೆ ನಿಜ. ಘಟನಾ ಸ್ಥಳದಲ್ಲಿ ಯಾವುದೇ ಪೋಟೋವನ್ನು ತೆಗೆಯದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.